ಆ) ದಾವಣಗೆರೆ ಜಿಲ್ಲೆಯೂ ಸೇರಿದಂತೆ (ಎಲ್ಲಾ 7 ಹೊಸ ಜಿಲ್ಲೆಗಳಿಗೆ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಶೀಘ್ರ ಪರಿಶೀಲನೆಯಲ್ಲಿದೆ. ಈ ನ್ಯಾಯಾಲಯಗಳಿಗೆ ಹುದ್ದೆಗಳನ್ನು ಸೃಜಿಸುವುದು ಒಳಗೊಂಡಂತೆ ಕಟ್ಟಡಗಳನ್ನು ಗುರ್ತಿಸುವುದು ಹಾಗೂ ನ್ಯಾಯಾಲಯಗಳನ್ನು ಸ್ಥಾಪಿಸಲು ಅವಶ್ಯವಾದ ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಹೊಸದಾಗಿ ಸೃಜಿಸಲಾಗಿರುವ ಏಳು ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವನ್ನು ಮಾತ್ರ ಸ್ಥಾಪಿಸಲಾಗುವುದು.

ದಾವಣಗೆರೆ ಜಿಲ್ಲೆಯಲ್ಲಿರುವ ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿ.

2897:(3950)

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ದಾವಣಗೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಸಂಖ್ಯೆ ಎಷ್ಟು (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು)

ಆ) ಈ ಜಿಲ್ಲೆಗೆ ಲೋಕೊಪಯೋಗಿ ಇಲಾಖೆಯಿಂದ ರಸ್ತೆ ಅಭಿವೃದ್ಧಿಗಾಗಿ ಕಳೆದ 4 ವರ್ಷಗಳಲ್ಲಿ ಬಿಡುಗಡೆಯಾದ ಹಣವೆಷ್ಟು? (ನೂತನ ದಾವಣಗೆರೆ ಜಿಲ್ಲೆಗೆ ಸೇರಿರುವ ತಾಲ್ಲೂಕುಗಳಿಗೆ ಈ ಹಿಂದಿನ ಜಿಲ್ಲೆಗಳಿಂದ ಬಿಡುಗಡೆಯಾಗಿರುವ ಹಣದ ವಿವರ ಒದಗಿಸುವುದು)

ಇ) ಲೋಕೋಪಯೋಗಿ ಇಲಾಖೆಯಿಂದ ಹಣ ಬಿಡುಗಡೆಯಾಗದೆ ದಾವಣಗೆರೆ ವಿಧಾನ ಸಭಾ ಕ್ಷೇತ್ರದಲ್ಲಿ ರಸ್ತೆ ಪೂರ್ತಿ ಹಾಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ದಾವಣಗೆರೆ ವಿಧಾನ ಸಭಾ ಕ್ಷೇತ್ರದ ಲೋಕೋಪಯೋಗಿ ಇಲಾಖೆ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡುವುದು ಹಾಗೂ ಯಾವಾಗ ರಸ್ತೆ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ದಾವಣಗೆರೆ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ

ಸಂಖ್ಯೆ ರಾಜ್ಯ ಹೆದ್ದಾರಿ-2.

ವಿಧಾನ ಸಭಾ ಕ್ಷೇತ್ರವಾರು ವಿವರ ಇಂತಿದೆ.

ವಿಧಾನ ಸಭಾ ಕ್ಷೇತ್ರ	ರಾಜ್ಯ ಹೆದ್ದಾರಿ (ಸಂಖ್ಯೆ)	ರಾಜ್ಯ ಹೆದ್ದಾರಿ	ಜಿಲ್ಲಾ ಮುಖ್ಯ ರಸ್ತೆ
		(ಕಿ.ಮಿ)	
1. ದಾವಣಗೆರೆ	1	8ಕಿಮಿ	1.90 ಕಿಮಿ
2. ಮಾಯಕೊಂಡ	-	24.60	123.00
3. ಹರಿಹರ	1	37.60	101.60
4. ಜಗಳೂರು	-	-	69.00
	2	70.20	402.60

ಜಿಲ್ಲಾ ಮುಖ್ಯ ರಸ್ತೆ ಎಲ್ಲಾ ತ್ಹಾಲೂಕಿನಲ್ಲಿ ಕ್ಷೇತ್ರದಲ್ಲಿ ಬರುವುದರಿಂದ ಸಂಖ್ಯೆ ನೀಡಲಾಗುವುದಿಲ್ಲ.

ಆ)

ವರ್ಷ	1995-96	96-97	97-98	98-99
	(ಲಕ್ಷ ರೂಪಾಯಿಗಳಲ್ಲಿ)			
ಯೋಜನೆ	122.00	128.50	158.72	42.75
ಯೋಜನೇತರ	58.85	58.85	74.39	74.39
	189.85	187.35	233.11	117.14

ಇ) ವಾರ್ಷಿಕ ದುರಸ್ತಿ ನಿರ್ವಹಣೆಗಾಗಿ ಹಣ ಬಿಡುಗಡೆ ಲೋಕೋಪಯೋಗಿ ಇಲಾಖೆಯಿಂದ ಆಗುತ್ತಿದೆ. ಆದರೆ ಇತ್ತೀಚಿನ ಭಾರಿ ಮಳೆಯಿಂದಾಗಿ ರಸ್ತೆಗಳು ಹಾಳಾಗಿರುತ್ತವೆ.

ಈ) ದಾವಣಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ರಾಜ್ಯ ಹೆದ್ದಾರಿಗಾಗಿ 14.04 ಲಕ್ಷ ಹಾಗೂ ಜಿಲ್ಲಾ ಮುಖ್ಯ ರಸ್ತೆಗಾಗಿ 60.30 ಲಕ್ಷದಂತೆ ವಾರ್ಷಿಕ ದುರಸ್ತಿ ಮತ್ತು ನಿರ್ವಹಣೆ ಅನುದಾನ ಬಿಡುಗಡೆ ಮಾಡುತ್ತಿದ್ದು ಈಗಾಗಲೇ ರಸ್ತೆ ಅಭಿವೃದ್ದಿ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಅನುದಾನದ ಲಭ್ಯತೆಯ ಮೇರೆಗೆ ಪೂರ್ಣಗೊಳಿಸಲಾಗುವುದು.

ಬೆಂಗಳೂರು-ಹೊನ್ನಾವರ ರಸ್ತೆ ಅಭಿವೃದ್ದಿ.

2898;(3925)

ಶ್ರೀ ಬಿ.ನಂಜಾಮರಿ (ತಿಪಟೂರು): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಹೊನ್ನಾವರ ರಸ್ತೆ ಮಳೆಯ ಅತಿವೃಷ್ಟಿಯಿಂದ ವಾಹನಗಳ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹಲವೆಡೆ ತೊಂದರೆ ಆಗಿರುವುದು ಗಮನಕ್ಕೆ ಬಂದಿದೆ.

ಆ) ಸದರಿ ರಸ್ತೆಯ ವಾರ್ಷಿಕ ಸಾಮಾನ್ಯ ದುರಸ್ತಿ ಅನುದಾನದಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ ಹಾನಿಗೊಳಗಾದ ರಸ್ತೆಯನ್ನು ತುರ್ತು ದುರಸ್ತಿ ಮಾಡಲಾಗುತ್ತಿದೆ.

ತಿಪಟೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳ ರಸ್ತೆಗಳ ದುರಸ್ತಿ.

2899:(3925)

ಶ್ರೀ ಬಿ.ನಂಜಾಮರಿ (ತಿಪಟೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತಿಪಟೂರು ತಾಲ್ಲೂಕಿನ ಮಳೆಯ ಅತೀ ವೃಷ್ಟಿಯಿಂದ ಗ್ರಾಮಾಂತರ